FirstRanker.com
Firstranker's choice
www.FirstRanker.com www.FirstRanker.com

This Question Paper consists 12 pages, including 31 questions.

**Roll No.**
ರೋಲ್ ನಂ. | | | | | | | | | | | | |

**Code No. 49/S/O/K**

**Set A**

# KANNADA
# ಕನ್ನಡ
# (208)

**Day and Date of Examination** ____________________
ಪರೀಕ್ಷೆಯ ದಿನ ಮತ್ತು ತಾರೀಖು

**Signature of Invigilators** 1. ____________________
ಉಸ್ತುವಾರಿದಾರರ ರುಜು
2. ____________________

---

**ಸಾಮಾನ್ಯ ಸೂಚನೆಗಳು :**

1. ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಯ ಮೊದಲ ಪುಟದಲ್ಲಿ ತಮ್ಮ ರೋಲ್ ನಂಬರ್ ಬರೆಯಬೇಕು.
2. ನಿಮಗೆ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಮೊದಲ ಮೇಲ್ಭಾಗದಲ್ಲಿ ಕೊಟ್ಟಿರುವ ಒಟ್ಟು ಪುಟಗಳ ಸಂಖ್ಯೆ ಹಾಗೂ ಒಟ್ಟು ಪ್ರಶ್ನೆಗಳ ಸಂಖ್ಯೆಗೆ ತಕ್ಕಂತೆ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಹಾಗೂ ಪ್ರಶ್ನೆಗಳು ಮುದ್ರಿತವಾಗಿದೆಯೇ ಎಂದು ಪರೀಕ್ಷಿಸಿ, ಪ್ರಶ್ನೆಗಳ ಕ್ರಮಸಂಖ್ಯೆ ಸರಿಯಾಗಿದೆಯೇ ಎಂದು ಪರೀಕ್ಷಿಸಿ.
3. ವಸ್ತುನಿಷ್ಠ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಪ್ರಶ್ನೆಯ ಜೊತೆಯಲ್ಲಿ ನೀಡಿರುವ ಉತ್ತರಗಳಿಂದಲೇ ಆರಿಸಿಕೊಳ್ಳಬೇಕು. ನಿಮಗೆ ಕೊಟ್ಟಿರುವ ಬೇರೆ ಉತ್ತರ ಪತ್ರಿಕೆಯಲ್ಲಿ ಸರಿಯಾದ ಉತ್ತರ ಸಂಖ್ಯೆ (A), (B), (C), (D) ಯನ್ನು ಬರೆಯಬೇಕು.
4. ಎಲ್ಲಾ ಪ್ರಶ್ನೆಗಳಿಗೂ ನಿರ್ದಿಷ್ಟ ಸಮಯದಲ್ಲಿಯೇ ಉತ್ತರ ಬರೆಯಬೇಕು. ವಸ್ತುನಿಷ್ಠ ಪ್ರಶ್ನೆಗಳಿಗೆ ಬೇರೆ ಸಮಯವನ್ನು ನೀಡಲಾಗುವುದಿಲ್ಲ.
5. ನಿಮ್ಮ ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ನಿರ್ದಿಷ್ಟ ಜಾಗದಲ್ಲಿ ಮಾತ್ರ ನಿಮ್ಮ ರೋಲ್ ನಂಬರ್ ಬರೆಯಬೇಕು. ಹಾಗಲ್ಲದೇ ಬೇರೆ ಎಲ್ಲಿಯೂ ನಿಮ್ಮ ಗುರುತು ನೀಡಬಹುದಾದ ನಿಮ್ಮ ರೋಲ್ ನಂಬರನ್ನು ಬರೆಯಕೂಡದು. ಒಂದು ವೇಳೆ ಹಾಗೇನಾದರೂ ಕಂಡುಬಂದಲ್ಲಿ ಅಂತಹ ವಿದ್ಯಾರ್ಥಿಗಳನ್ನು ಅನರ್ಜಿತಗೊಳಿಸಲಾಗುವುದು.
6. ನಿಮ್ಮ ಪ್ರಶ್ನೆ ಪತ್ರಿಕೆಯ ಕೋಡ್ ನಂಬರ್ **49/S/O/K** ಉತ್ತರ ಪತ್ರಿಕೆಯಲ್ಲಿ ಬರೆಯಿರಿ.



FirstRanker.com
Firstranker's choice
www.FirstRanker.com

FirstRanker.com
Firstranker's choice
www.FirstRanker.com www.FirstRanker.com

# KANNADA

# ಕನ್ನಡ

# (208)

ಸಮಯ : 3 ಗಂಟೆಗಳು ] [ ಗರಿಷ್ಠ ಅಂಕ : 100

---

**ಸೂಚನೆಗಳು :** (1) ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳನ್ನು ಉತ್ತರ ಪುಸ್ತಕದಲ್ಲೇ ಬರೆಯಿರಿ.

(2) ಪ್ರಶ್ನೆ ಮತ್ತು ಉಪಪ್ರಶ್ನೆಗಳ ಸಂಖ್ಯೆಗಳನ್ನು ಸರಿಯಾಗಿ ಬರೆಯಿರಿ.

---

ಪ್ರಶ್ನೆ ಸಂಖ್ಯೆ 1 ರಿಂದ 11 ರವರೆಗೆ 4 ಆಯ್ಕೆಗಳನ್ನು ಕೊಡಲಾಗಿದೆ. ಅತ್ಯಂತ ಸೂಕ್ತವಾದುದನ್ನು ಆಯ್ಕೆಮಾಡಿ ಉತ್ತರಿಸಿ.

**1.** ಮಲೆನಾಡಿನಲ್ಲಿ 'ಮೈಲಿ' ಎಂದರೆ ________. **1**

(A) ಸಾವು (B) ಕಾವು (C) ನೋವು (D) ನಲಿವು

**2.** ಕುವೆಂಪು ಅವರು ಹುಟ್ಟಿದ ಇಸ್ವಿ ________. **1**

(A) 1804 (B) 1910 (C) 1904 (D) 1994

**3.** ಕೊಕ್ಕರೆಗಳ ಕೊಕ್ಕು ________. **1**

(A) ಗುಮ್ಮಟದಂತೆ (B) ಚಿಮ್ಮಟದಂತೆ

(C) ದಿಮ್ಮಿನಂತೆ (D) ಚೂರಿಯಂತೆ



FirstRanker.com
Firstranker's choice
www.FirstRanker.com

FirstRanker.com
Firstranker's choice
www.FirstRanker.com www.FirstRanker.com

4. ಚೌರದವನ ಮನೆಯಲ್ಲಿ ______ ಹುಡುಗಿಯರು ಇರುತ್ತಾರೆ. 1

(A) ಮೂವರು (B) ಇಬ್ಬರು

(C) ನಾಲ್ಕು ಜನ (D) ಒಬ್ಬರು

5. ಹೊತ್ತಿಗ್ಗಾಗ ಬರಿ ______. 1

(A) ನೊಗಭಾರ (B) ಶಿವಬಲ್ಲಾ

(C) ಶಾಸ್ತ್ರದಾಧಾರ (D) ಸಾರ

6. ಶಾಲುಸಾಬಿ ತಾನೇ ನಮ್ಮ ಊರಿನ ______. 1

(A) ಧರ್ಮಾವತಾರ (B) ರಾಮಾವತಾರ

(C) ಕೃಷ್ಣಾವತಾರ (D) ಕಲ್ಕಿವತಾರ

7. ಭಯ ಕಾಯಿಲೆ ಚಿಹ್ನೆಗಳನ್ನು ______. 1

(A) ಕಡಿಮೆ ಮಾಡುತ್ತದೆ (B) ಹೆಚ್ಚಿಸುತ್ತದೆ

(C) ಕುಂದಿಸುತ್ತದೆ (D) ಓಡಿಸುತ್ತದೆ

8. ಬೆಟ್ಟದ ಮೇಲೊಂದು ಮನೆಯ ಮಾಡಿ ಅಂಜುವುದು ______. 1

(A) ಕಾಡುಗಳಿಗೆ (B) ಪಕ್ಷಿಗಳಿಗೆ

(C) ಮೃಗಗಳಿಗೆ (D) ಮನುಷ್ಯರಿಗೆ



FirstRanker.com
Firstranker's choice
www.FirstRanker.com

9. ಕಾರಮಕ್ಕ ಎಂದರೆ ________. 1

(A) ಕಾಡಿನ ಮಕ್ಕಳು (B) ಪ್ರಾಣಿಗಳು

(C) ಕಾರಯ್ಯನ ಮಕ್ಕಳು (D) ಶಿವನ ಹೆಂಡತಿ

10. ಆಚಾರವಂತರ ಮನೆಯಲ್ಲಿ ಒಂದು ________ ಇತ್ತು. 1

(A) ಬೆಕ್ಕು (B) ನಾಯಿ

(C) ಕುದುರೆ (D) ಮಗು

11. ಕುಲಕುಲ ಕುಲವೆಂದು ________. 1

(A) ಹೊಡೆದಾಡಿ (B) ಹೊಡೆದಾಡದಿರಿ

(C) ಹೋರಾಡಿ (D) ಕುಣಿದಾಡಿ

12. ಈ ಗದ್ಯಭಾಗವನ್ನು ಓದಿಕೊಂಡು ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ.

ಇಪ್ಪತ್ತೊಂದನೇ ಶತಮಾನದಲ್ಲಿ ವಿಜ್ಞಾನ ಹಾಗೂ ತಂತ್ರಜ್ಞಾನ ಬೆಳವಣಿಗೆಯಿಂದಾಗಿ ಜಗತ್ತಿನಲ್ಲೆಲ್ಲಾ ಕೆಲವು ವಿಶಿಷ್ಟವಾದ ಸಮಸ್ಯೆಗಳು ಹುಟ್ಟಿಕೊಂಡಿವೆ. ಮಾನವ ಹಕ್ಕುಗಳ ಉಲ್ಲಂಘನೆ, ವರ್ಣಭೇದ ನೀತಿ, ದ್ವೇಷ, ಅಸೂಯೆ, ಧರ್ಮಾಂಧತೆ ಇವುಗಳಿಂದಾಗಿ ಜಗತ್ತಿನಲ್ಲಿ ಹಿಂಸೆ ತಾಂಡವವಾಡುತ್ತಿದೆ. ರಾಷ್ಟ್ರ ರಾಷ್ಟ್ರಗಳ ನಡುವೆ ಅಸಮಾನತೆ ಹೆಚ್ಚಾಗಿ ಜನ ಸಮುದಾಯದ ಹಿತದ ಕಲ್ಪನೆ ನಾಶವಾಗುತ್ತಲಿದೆ. ಮಾನವನ ಬೆಳವಣಿಗೆಯ ಇತಿಹಾಸದಲ್ಲಿ ಹಕ್ಕುಗಳನ್ನು ನಿರಾಕರಿಸುವ ಪ್ರಯತ್ನ ಕಂಡುಬರುತ್ತದೆ. ಈ ಹಕ್ಕುಗಳನ್ನು ಪ್ರತಿಷ್ಠಾಪಿಸಲು ಅನೇಕ ಜನ ತತ್ವಜ್ಞಾನಿಗಳು, ಸಮಾಜ ಚಿಂತಕರು ಹಾಗೂ ಕ್ರಾಂತಿ ಪುರುಷರು ಮಾನವ ಹಕ್ಕುಗಳ ಸಮರ್ಥನೆಗಾಗಿ ತಮ್ಮ ಧ್ವನಿ ಎತ್ತಿದ್ದಾರೆ.

1776 ರ ಅಮೇರಿಕಾದ ಸ್ವಾತಂತ್ರ್ಯ ಘೋಷಣೆ, 1789 ರ ಫ್ರೆಂಚರ ಮಾನವ ಹಕ್ಕುಗಳ ಘೋಷಣೆಗಳು ಮಾನವ ಹಕ್ಕುಗಳನ್ನು ಸ್ಪಷ್ಟಪಡಿಸಿವೆ. ದ್ವಿತೀಯ ಮಹಾಯುದ್ಧದಲ್ಲಿ ಸಾಮ್ರಾಜ್ಯಶಾಹಿ ಹಿಟ್ಲರ್ ಲಕ್ಷಾಂತರ ಯಹೂದಿಗಳ ಬರ್ಬರ ಕೊಲೆ ಮಾಡಿದಾಗ ಮಾನವ ಹಕ್ಕುಗಳ ಆಂದೋಲನಕ್ಕೆ ಪುನರ್ ಚಾಲನೆ ದೊರಕಿತು.

**ಪ್ರಶ್ನೆಗಳು :**

(1) ರಾಷ್ಟ್ರ ರಾಷ್ಟ್ರಗಳ ನಡುವೆ ಹೆಚ್ಚಿದ್ದು ಏನು ? 1

(ಅ) ಸಮಾನತೆ (ಆ) ಅಸಮಾನತೆ

(ಇ) ಹೊಡೆದಾಟ (ಈ) ಯುದ್ಧ



FirstRanker.com
Firstranker's choice
www.FirstRanker.com

(2) ಫ್ರೆಂಚರ ಘೋಷಣೆ ಯಾವಾಗ ? 1

(ಅ) 1776 (ಆ) 1789

(ಇ) 1780 (ಈ) 1889

(3) ವಿಜ್ಞಾನ ಹಾಗೂ ತಂತ್ರಜ್ಞಾನ ಬೆಳವಣಿಗೆ ಯಾವಾಗ ಆಯಿತು ? 1

(4) ವಿಶಿಷ್ಟವಾದ ಸಮಸ್ಯೆಗಳು ಯಾವುವು ? 2

(5) ಯಾವುದರಿಂದ ಜನರ ಹಿತದ ಕಲ್ಪನೆ ನಾಶವಾಗುತ್ತಲಿದೆ ? 2

(6) ಮಾನವನ ಬೆಳವಣಿಗೆಯ ಇತಿಹಾಸದಲ್ಲಿ ಯಾವ ಪ್ರಯತ್ನ ಕಂಡುಬರುತ್ತದೆ ? 1

(7) ಹಕ್ಕುಗಳನ್ನು ಪ್ರತಿಷ್ಠಾಪಿಸಲು ಯಾರ್‍ಯಾರು ಧ್ವನಿ ಎತ್ತಿದ್ದಾರೆ ? 2

(8) ಪುನರ್ ಚಾಲನೆ ಹೇಗೆ ದೊರಕಿತು ? ಮತ್ತು ಯಾವುದಕ್ಕೆ ? 2

(9) ಈ ಗದ್ಯಭಾಗಕ್ಕೆ ತಲೆಬರಹ ಕೊಡಿ. 1

FirstRanker.com
Firstranker's choice
www.FirstRanker.com www.FirstRanker.com

13. ಕೊಟ್ಟಿರುವ ಕಾವ್ಯಾಂಶವನ್ನು ಓದಿರಿ. ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿರಿ.

'ಪ್ರೀತಿ'
ಪ್ರೀಯವಾಗುತ್ತದೆ
ಯಾಕೆಂದರೆ ಅದಕ್ಕೆ
ಬಣ್ಣ, ರುಚಿ ಹಾಗೂ
ವಾಸನೆ ಇದೆ.
'ಪ್ರೀತಿ'
ಶೂನ್ಯಕ್ಕೆ ಸಮ
ಯಾಕೆಂದರೆ ಅದು
ಎಲ್ಲವೂ ಹೌದು
ಏನೇನೂ ಅಲ್ಲ !

– ಸವಿತಾ ನಾಗಭೂಷಣ

ಪ್ರಶ್ನೆಗಳು :

(1) 'ಶೂನ್ಯ' ಇದರ ತದ್ಭವ ________. 1

(ಅ) ಶೂನ (ಆ) ಸೂನ

(ಇ) ಸೊನ್ನೆ (ಈ) ಮೂಜಿ

(2) 'ಪ್ರೀತಿ' ಇದರ ವಿರುದ್ಧ ಪದ ________. 1

(3) 'ಪ್ರೀತಿ' ಹೇಗೆ ಪ್ರೀಯವಾದುದು ? 2

(4) 'ಪ್ರೀತಿ ಶೂನ್ಯದಂತೆ' ವಿವರಿಸಿರಿ. 2



FirstRanker.com
Firstranker's choice
www.FirstRanker.com

FirstRanker.com
Firstranker's choice
www.FirstRanker.com www.FirstRanker.com

14. ಗಾಂಧೀಜಿಗಾಗಿ ಸ್ತ್ರೀಯರು ಏನನ್ನು ತ್ಯಾಗ ಮಾಡಿದರು ? 1

15. ಬೆಳಗಿನ ಜಾವದಲ್ಲಿ ಎಂತಹ ಭಾವನೆಗಳು ತಲೆದೋರುವುದು ? 1

16. ನಾಯಿ ಏನನ್ನು ಕಂಡು ಬೊಗಳುವುದು ಸಹಜ ? 1

17. ಕಥಾನಾಯಕನ ಬಲವಾದ ಇಚ್ಛೆ ಯಾವುದು ? 1

18. (ಅ) ಮೊದಲೆರಡು ಪದಗಳಿಗಿರುವ ಸಂಬಂಧದಂತೆ–ಮೂರನೆ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ. 1

ಪೌಷ್ಟಿಕಾಂಶ : ಸವರ್ಣದೀರ್ಘ ಸಂಧಿ ; ಒಂದಾವರ್ತಿ________.

(ಆ) ಇತ್ಯಾದಿ, ಅತ್ಯಗತ್ಯ, ಗತ್ಯಂತರ, ಮನೆಯನ್ನು – ಇಲ್ಲಿ ಗುಂಪಿಗೆ ಸೇರದ ಪದ ________. 1

19. ಕೆಳಗಿನವುಗಳಿಗೆ ಉತ್ತರಿಸಿರಿ.

(ಅ) ಇಲ್ಲಿರುವ ಪದಗಳಲ್ಲಿ **ಯಾವುದಾದರೂ ಎರಡನ್ನು** ಬಿಡಿಸಿ ಬರೆಯಿರಿ. 2

(1) ಪೌಷ್ಟಿಕಾಂಶ

(2) ಔಷಧೋಪಚಾರ

(3) ಪರೀಕ್ಷಾವಧಿ

**ಅಥವಾ**

(ಅ) ಇಲ್ಲಿರುವ ಪದಗಳಲ್ಲಿ **ಯಾವುದಾದರೂ ಎರಡನ್ನು** ಕೂಡಿಸಿ ಬರೆಯಿರಿ. 2

(1) ಚಿಕಿತ್ಸೆ + ಅನ್ನು

(2) ವೈದ್ಯರು + ಅಲ್ಲಿಗೆ

(3) ಅರ್ಥ + ಇಲ್ಲದ



FirstRanker.com
Firstranker's choice
www.FirstRanker.com

FirstRanker.com
Firstranker's choice
www.FirstRanker.com www.FirstRanker.com

(ಆ) 'ವಂತ' ಪ್ರತ್ಯಯ ಸೇರಿಸಿ ಎರಡು ಶಬ್ದ ಬರೆಯಿರಿ. 2

**ಅಥವಾ**

(ಆ) 'ಅನ್ನು' ಪ್ರತ್ಯಯಕ್ಕೆ ಸಂಬಂಧಿಸಿದಂತೆ ಎರಡು ಶಬ್ದ ಬರೆಯಿರಿ. 2

(ಇ) ಕೊಟ್ಟಿರುವ ವಾಕ್ಯಗಳಲ್ಲಿ ಗೆರೆ ಎಳೆದಿರುವ ಶಬ್ದಕ್ಕೆ ವಿರುದ್ಧ ಪದ ಬರೆಯಿರಿ. 2

(1) ಓಟುರುಕಗಳು ಬಿಸಿಲು ಕಾಯಿಸುತ್ತಾ ಕುಳಿತಿದ್ದವು.

(2) ಭಾರತಮಾತೆಗೆ ಸ್ವಾತಂತ್ರ್ಯವೇ ಗುಡಿಯಾಗಿದೆ.

**ಅಥವಾ**

(ಇ) ಕೆಳಗೆ ಕೊಟ್ಟಿರುವ **ಯಾವುದಾದರೂ ಎರಡಕ್ಕೆ** ಒಂದೊಂದು ಸಮನಾರ್ಥಕ ಪದ ಬರೆಯಿರಿ. 2

(1) ತೆಂಕಣ

(2) ಆಗರ

(3) ಮುಟ್ಟು

20. ಕೆಳಗೆ ಕೊಟ್ಟಿರುವ ನುಡಿಗಟ್ಟುಗಳಲ್ಲಿ **ಯಾವುದಾದರೂ ಎರಡನ್ನು** ನಿಮ್ಮ ವಾಕ್ಯಗಳಲ್ಲಿ ಬರೆಯಿರಿ. 2

(1) ಹುರಿದುಂಬಿಸು

(2) ರಾಮಬಾಣ

(3) ಹೊಟ್ಟೆ ಬಟ್ಟೆಕಟ್ಟು



FirstRanker.com
Firstranker's choice
www.FirstRanker.com

21. ಅರ್ಜಿಯಲ್ಲಿ ಸ್ವ–ವಿಳಾಸ ('ಇಂದ' ವಿಳಾಸವನ್ನು) ಏಕೆ ಬರೆಯುತ್ತಾರೆ ? 1

22. ಬೇಂದ್ರೆಯವರು ಬಸವಣ್ಣನ ಮಹತ್ವವನ್ನು ಹೇಗೆ ಸಾರಿದ್ದಾರೆ ? 4

23. ಕಥಾನಾಯಕನ ತಂಗಿ ವಿಜಯಳ ಸ್ವಭಾವವನ್ನು ಬರೆಯಿರಿ. 5

24. ರಾವಣನ ಪಾತ್ರವನ್ನು ಸಂಕ್ಷೇಪವಾಗಿ ನಿಮ್ಮ ಮಾತುಗಳಲ್ಲಿ ವಿವರಿಸಿರಿ. 5

**ಅಥವಾ**

ಬನವಾಸಿ ಪ್ರಾಂತ್ಯದ ಪ್ರಾಕೃತಿಕ ಸಂಪತ್ತನ್ನು ಪಂಪನ ಮಾತಿನಲ್ಲಿ ತಿಳಿಸಿರಿ. 5

25. ಕೊಟ್ಟಿರುವ ಪದಗಳಲ್ಲಿ **ಯಾವುದಾದರೂ ಎರಡಕ್ಕೆ**, ಎರಡು ಶಬ್ದಗಳನ್ನು ಬಳಸಿಕೊಂಡು ಅರ್ಥಪೂರ್ಣವಾಗಿ ನಿಮ್ಮ ವಾಕ್ಯಗಳಲ್ಲಿ ಬರೆಯಿರಿ. 2+2=4

(ಅ) ಕಷ್ಟ / ಸುಖ (ಆ) ರಾಜ / ಮಂತ್ರಿ (ಇ) ಅಮೃತ / ವಿಷ

26. ಬಸವೇಶ್ವರ ಪ್ರೌಢಶಾಲೆ ಬಾಗಲಕೋಟೆ–ಇಲ್ಲಿ 10ನೇ ತರಗತಿಯಲ್ಲಿ ವ್ಯಾಸಂಗ ಮಾಡಲು ದಾಖಲಾದ ವಿದ್ಯಾರ್ಥಿಗಳ ಬೆಳವಣಿಗೆ ಸಂಖ್ಯೆಯನ್ನು ಕೊಡಲಾಗಿದೆ. ಅದರ ಸಹಾಯದಿಂದ ಏಕರೇಖಾ ಚಿತ್ರವನ್ನು ರಚಿಸಿರಿ. 5

| ವರ್ಷ ತಿಂಗಳು | 1992 ಜೂನ್ | 1992 ಅಕ್ಟೋಬರ್ | 1993 ಜೂನ್ | 1993 ಅಕ್ಟೋಬರ್ | 1994 ಜೂನ್ | 1994 ಅಕ್ಟೋಬರ್ | 1995 ಜೂನ್ | 1995 ಅಕ್ಟೋಬರ್ | 1996 ಜೂನ್ | 1996 ಅಕ್ಟೋಬರ್ | 1997 ಜೂನ್ | 1997 ಅಕ್ಟೋಬರ್ |
|---|---|---|---|---|---|---|---|---|---|---|---|---|
| ದಾಖಲಾದ ಒಟ್ಟು ವಿದ್ಯಾರ್ಥಿಗಳು | 1740 | 1850 | 2050 | 2100 | 3210 | 3260 | 4300 | 5450 | 5650 | 7800 | 8940 | 9115 |

**ಅಥವಾ**

FirstRanker.com
Firstranker's choice
www.FirstRanker.com www.FirstRanker.com

26. ನೀವು ರಮಾದೇವಿ, ತಂದೆ ದೇವಪ್ರಸಾದ. ಬಿ.ಎಸ್‌ಸಿ., ಬಿ.ಎಡ್. ಪದವೀಧರರು, ಊರು ಮಂಗಳೂರು ಎಂದು ಭಾವಿಸಿ ಕೆಳಗಿರುವ ಅರ್ಜಿಯನ್ನು ಭರ್ತಿ ಮಾಡಿರಿ. 5

**ಉದ್ಯೋಗಕ್ಕಾಗಿ ಅರ್ಜಿ**

ಗೆ,

ಅಧ್ಯಕ್ಷರು,

ಶರಣ ಬಸವೇಶ್ವರ ವಿದ್ಯಾವರ್ಧಕ ಸಂಘ,

ಗುಲ್ಬರ್ಗಾ.

ಉದ್ಯೋಗದ ಹೆಸರು – ಮಾಧ್ಯಮಿಕ ಶಾಲಾ ಶಿಕ್ಷಕರು (ವಿಜ್ಞಾನ ವಿಷಯ)

ಹೆಸರು : ....................

ತಂದೆಯ ಹೆಸರು : ....................

ಜನ್ಮ ಸ್ಥಳ : ....................

ಹುಟ್ಟಿದ ದಿನಾಂಕ : ....................

ಪೂರ್ಣ ವಿಳಾಸ : ....................

ರಾಷ್ಟ್ರೀಯತೆ : ....................

ಮತ / ಜಾತಿ : ....................

ವಿದ್ಯಾರ್ಹತೆ : ....................

ಅನುಭವ : ....................

ಓದಿದ ಶಾಲೆಯಿಂದ ದೃಢೀಕರಣ ಪತ್ರ : ....................

ಬ್ಯಾಂಕಿನಿಂದ ಖರೀದಿಸಿದ ಡಿ.ಡಿ. (DD) ನಂ. : .................... ದಿನಾಂಕ : ....................

ಮೇಲ್ಕಂಡ ಎಲ್ಲಾ ವಿಷಯಗಳಿಗೆ ಸಂಬಂಧಿಸಿದ ಸರ್ಟಿಫಿಕೇಟುಗಳನ್ನು ಲಗತ್ತಿಸಿದೆ. ನಾನು ಸಲ್ಲಿಸುತ್ತಿರುವ ಅರ್ಜಿಯಲ್ಲಿ ಎಲ್ಲಾ ವಿಚಾರಗಳು ಸತ್ಯವಾಗಿವೆ ಎಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : ....................

ಉದ್ಯೋಗಾಕಾಂಕ್ಷಿಯ ಸಹಿ

(ಹೆಸರು)



FirstRanker.com
Firstranker's choice
www.FirstRanker.com

FirstRanker.com
Firstranker's choice
www.FirstRanker.com www.FirstRanker.com

27. ಹುಯೆನ್ – ತ್ಸಾಂಗನ ಬಾಲ್ಯ ಜೀವನವನ್ನು ಕುರಿತು ಬರೆಯಿರಿ. 5

28. ಈ ವಾಕ್ಯಗಳನ್ನು ಓದಿ ಉತ್ತರ ಬರೆಯಿರಿ. 1x5=5

(1) ಹುಟ್ಟಿದರ ಕನ್ನಡಿ ನಾಡಿನಲ್ಲಿ ಹುಟಬಾಕು. (ಶುದ್ಧ ರೂಪದಲ್ಲಿ ಬರೆಯಿರಿ)

(2) ಹುಡುಗರು ಸಾಮೂಹಿಕವಾಗಿ ಹಾಡಿದರು : ಹುಡುಗರು, ಇದರ ಏಕವಚನ ರೂಪ __________.

(3) ಬೇಗಬೇಗ : ದ್ವಿರುಕ್ತಿ : : ಕಷ್ಟ–ಕಾರ್ಪಣ್ಯ : __________.

(4) ಸೀತೆ ಶಾಲೆಗೆ ಹೋದಳೆ __________ (ಇಲ್ಲಿ ಇರಬೇಕಾದ ಲೇಖನ ಚಿಹ್ನೆ)

(5) ನಾನು ಶಾಲೆಗೆ ಹೋಗುವೆನು. (ಇದನ್ನು ಭೂತಕಾಲಕ್ಕೆ ಪರಿವರ್ತಿಸಿರಿ)

29. ಹತ್ತನೇ ತರಗತಿಯಲ್ಲಿ ಓದುತ್ತಿರುವ ಮಾಲಾ/ಗಣೇಶ ಆದ ನೀವು ನಿಮ್ಮ ಮನೆಯಲ್ಲಿ ವಿವಾಹ ಇದ್ದ ಕಾರಣ 2 ದಿನಗಳ ರಜೆ ಕೋರಿ ಮುಖ್ಯೋಪಾಧ್ಯಾಯರು, ಆದರ್ಶ ಪ್ರೌಢ ಶಾಲೆ, ಗಾಂಧೀಜಿ ಮಾರ್ಗ ಬೆಂಗಳೂರು, ಇವರಿಗೆ ಒಂದು ಪತ್ರ ಬರೆಯಿರಿ. 7

**ಅಥವಾ**

29. ತಾವು ರಾಯಚೂರಿನಲ್ಲಿರುವ ಸರ್ಕಾರಿ ವಸತಿ ಶಾಲೆಯೊಂದರಲ್ಲಿ 10 ನೇ ತರಗತಿಯಲ್ಲಿ ಕಲಿಯುತ್ತಿರುವ ಹರ್ಷ/ವಾಣಿಶ್ರೀ ಎಂದು ಭಾವಿಸಿ ನಿಮ್ಮ ತಂದೆ ರಾಮಾನುಜಾಚಾರ್ಯ, ಮನೆ–ಸಂಖ್ಯೆ 154, ರಾಜಾಜಿನಗರ, ಬೆಂಗಳೂರು, ಇವರಿಗೆ ಪ್ರಜಾರಾಜ್ಯೋತ್ಸವಕ್ಕೆ ಆಹ್ವಾನಿಸಿ ಒಂದು ಪತ್ರ ಬರೆಯಿರಿ. 7

30. ಈ ಕೆಳಗಿನ ಗಾದೆಗಳಲ್ಲಿ **ಯಾವುದಾದರೂ ಒಂದನ್ನು** ಕುರಿತು 50 ಶಬ್ದಗಳಿಗೆ ಮೀರದಂತೆ ಬರೆಯಿರಿ. 5

(1) ಮಾತೇ ಮುತ್ತು ; ಮಾತೇ ಮೃತ್ಯು

(2) ಕುಂಬಾರನಿಗೆ ವರುಷ ; ದೊಣ್ಣೆಗೆ ನಿಮಿಷ

(3) ತುಂಬಿದ ಕೊಡ ತುಳುಕುವುದಿಲ್ಲ



FirstRanker.com
Firstranker's choice
www.FirstRanker.com

FirstRanker.com
Firstranker's choice
www.FirstRanker.com www.FirstRanker.com

31. ಈ ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ **ಯಾವುದಾದರೂ ಒಂದನ್ನು** ಕುರಿತು **200** ಶಬ್ದಗಳಿಗೆ ಮೀರದಂತೆ ಪ್ರಬಂಧವನ್ನು ಬರೆಯಿರಿ. **10**

(1) ಜಾಗತೀಕರಣ

(2) ನಿಮ್ಮ ನೆಚ್ಚಿನ ಕವಿ

(3) ಗ್ರಂಥಾಲಯ

- o O o -

firstranker.com
www.FirstRanker.com



FirstRanker.com
Firstranker's choice
www.FirstRanker.com